210 (633) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇದುವರೆಗೆ ಮಂಜೂರಾದ ಏತ ನೀರಾವರಿ ಯೋಜನೆಗಳು ಯಾವುವು;

ಆ) ಇವುಗಳಲ್ಲಿ ಅಪೂರ್ಣಗೊಂಡ ಯೋಜನೆಗಳು ಎಷ್ಟು;

ಇ) ಇವುಗಳನ್ನು ಯಾವಾಗ ಪ್ರಾರಂಭಿಸಲಾಯಿತು

ಈ) ಇವುಗಳು ಪೂರ್ಣಗೊಳ್ಳಲು ಬೇಕಾದ ಅಂದಾಜು ವೆಚ್ಚ ಎಷ್ಟು?

ಉ) ಈ ಯೋಜನೆಗಳಿಗೆ ಈ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣ ಎಷ್ಟು;

ಊ) ಹಣ ಬಿಡುಗಡೆ ಮಾಡದಿದ್ದಲ್ಲಿ ಕಾರಣಗಳೇನು;

ಋ) ಅಪೂರ್ಣಗೊಂಡ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾದ ಮೊತ್ತವನ್ನು ಬಿಡುಗಡೆಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇದುವರೆಗೆ ಮಂಜೂರಾದ ಏತ ನೀರಾವರಿ ಯೋಜನೆಗಳು.

1. ಮಂಡಗದ್ದೆ ಏ.ನೀ. ಯೋಜನೆ.
2. ಸೇಗುವಳ್ಳಿ ಏ.ನೀ. ಯೋಜನೆ.
3. ತೂದೂರು ಏ.ನೀ. ಯೋಜನೆ.
4. ಬಕ್ಲಾಪುರ ಏ.ನೀ. ಯೋಜನೆ.
5. ಬಸವಾನಿ ಏ.ನೀ. ಯೋಜನೆ.
6. ಅಲಗೇರಿ ಏ.ನೀ. ಯೋಜನೆ.
7. ಹೊಸಹಳ್ಳಿ ಏ.ನೀ. ಯೋಜನೆ.
8. ಮೀನುಗುಂದ ಏ.ನೀ. ಯೋಜನೆ.
9. ದಬ್ಬಣಗದ್ದೆ ಏ.ನೀ. ಯೋಜನೆ.

ಆ) ಇ) ಈ) ಮತ್ತು ಉ)

ಕ್ರ. ಸಂ.	ಅಪೂರ್ಣಗೊಂಡ ಯೋಜನೆಗಳು	ಪ್ರಾರಂಭಿಸಿದ ದಿನಾಂಕ	ಪೂರ್ಣಗೊಳ್ಳಲು ಬೇಕಾದ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	2004–05ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಹಣ(ಲಕ್ಷ ರೂ.ಗಳಲ್ಲಿ)
1.	ಹೊಸಹಳ್ಳಿ ಏ.ನಿ. ಯೋಜನೆ	14–2–02	18.76	17.24
2.	ಮೀನುಗುಂದ ಏ.ನೀ. ಯೋಜನೆ	19–11–98	5.42	0.86

3.	ದಬ್ಬಣಗದ್ದೆ ಏ.ನೀ. ಯೋಜನೆ	31-3-01	29.65	–

ಊ) ಮೀನುಗುಂದ ಮತ್ತು ಹೊಸಹಳ್ಳಿ ಏತ ನೀರಾವರಿ ಯೋಜನೆಗಳಿಗೆ ಬೆಲೆ ಹೆಚ್ಚುವರಿ ಪ್ರಸ್ತಾವನೆ ನಬಾರ್ಡ್‌ಗೆ ಸಲ್ಲಿಸಿದ್ದು ನಬಾರ್ಡ್‌ನಿಂದ ಅನುಮೋದನೆ ಇನ್ನೂ ದೊರೆಯಬೇಕಾಗಿದೆ. ಆದುದರಿಂದ, ಉಳಿಕೆ ಹಣ ಬಿಡುಗಡೆಯಾಗಿಲ್ಲ. ದಬ್ಬಣಗದ್ದೆ ಏತ ನೀರಾವರಿ ಯೋಜನೆಯು 4702 ಲೆಕ್ಕ ಶೀರ್ಷಿಕೆಯಡಿಯಲ್ಲಿ ಕೈಗೊಂಡಿದ್ದು ಈವರೆಗೆ ಯಾವುದೇ ವೆಚ್ಚವಾಗಿಲ್ಲ. ಈ ಬಗ್ಗೆ 8.20 ಲಕ್ಷ ರೂ.ಗಳ ಬಿಲ್ಲು ಪಾವತಿಸಲು ಬಾಕಿ ಇದ್ದು, ಅನುದಾನದ ಕೊರತೆಯಿದ್ದು ಹಣ ಬಿಡುಗಡೆಯಾಗಿಲ್ಲ.

ಋ) ಹೌದು. ಅನುದಾನದ ಲಭ್ಯತೆಯ ಮೇಲೆ ಹಣವನ್ನು ಬಿಡುಗಡೆ ಮಾಡಲಾಗುವುದು.

211 (634) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ತಾಲ್ಲೂಕುಗಳನ್ನು ನಕ್ಸಲೀಯರ ಚಟುವಟಿಕೆ ಗುರುತಿಸಲಾಗಿದೆ;

ಆ) ಈ ಹಿನ್ನೆಲೆಯಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಪೊಲೀಸ್ ಇಲಾಖೆಯ ಬಲವರ್ಧನೆಗೆ ಹಾಗೂ ನಕ್ಸಲೀಯರ ಚಟುವಟಿಕೆ ನಿಗ್ರಹಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಈ ಹಿನ್ನೆಲೆಯಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಪೊಲೀಸ್ ಇಲಾಖೆಯ ಬಲವರ್ಧನೆಗೆ ಹಾಗೂ ನಕ್ಸಲೀಯರ ಚಟುವಟಿಕೆ ನಿಗ್ರಹಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ಆಗುಂಬೆಯಲ್ಲಿರುವ ಪೊಲೀಸ್ ಔಟ್ ಪೋಸ್ಟ್‌ನ್ನು ಠಾಣೆ ಮಟ್ಟಕ್ಕೆ ಮೇಲ್ದರ್ಜೆಗೆ ಏರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಉ) ಹಾಗಿದ್ದಲ್ಲಿ ಎಂದಿನಿಂದ ಮೇಲ್ದರ್ಜೆಗೇರಿಸಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ರಾಜ್ಯದ ಈ ಕೆಳಕಂಡ ಜಿಲ್ಲೆಯ ಕೆಲವೊಂದು ತಾಲ್ಲೂಕುಗಳನ್ನು ನಕ್ಸಲೀಯರ ಚಟುವಟಿಕೆ ಇರುವ ತಾಲ್ಲೂಕುಗಳೆಂಯ ಗುರುತಿಸಲಾಗಿದೆ.

1) ತುಮಕೂರು ಜಿಲ್ಲೆ : ಪಾವಗಡ
2) ಶಿವಮೊಗ್ಗ ಜಿಲ್ಲೆ : ತೀರ್ಥಹಳ್ಳಿ
3) ಬಳ್ಳಾರಿ ಜಿಲ್ಲೆ : ಬಳ್ಳಾರಿ, ಶಿರಗುಪ್ಪ ಹೊಸಪೇಟೆ ಸಂಡೂರು
4) ದಕ್ಷಿಣ ಕನ್ನಡ ಜಿಲ್ಲೆ : ಬೆಳ್ತಂಗಡಿ
5) ಚಿಕ್ಕಮಗಳೂರು ಜಿಲ್ಲೆ : ಶೃಂಗೇರಿ, ಎನ್.ಆರ್. ಪುರ ಮೂಡಿಗೇರಿ
6) ಉಡುಪಿ ಜಿಲ್ಲೆ : ಕುಂದಾಪುರ, ಕಾರ್ಕಳ
7) ಬೀದರ್ ಜಿಲ್ಲೆ : ಔರಾದ್
8) ರಾಯಚೂರು ಜಿಲ್ಲೆ : ರಾಯಚೂರು
9) ಗುಲ್ಬರ್ಗಾ ಜಿಲ್ಲೆ : ಚಿಂಚೋಳಿ, ಸೇಡಂ, ಯಾದಗಿರಿ